# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 372

ಉತ್ತರಿಸಬೇಕಾದ ದಿನಾಂಕ : 12.12.2018

ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಸರ್ಕಾರ ಪಹಣಿ, ಮ್ಯುಟೇಷನ್ ಮತ್ತಿತರ ಕಂದಾಯ ಆಸ್ತಿಗಳ ದಾಖಲೆ ಪತ್ರಗಳ ಬೆಲೆಯನ್ನು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭೂಮಿ ಯೋಜನೆ ಪ್ರಾರಂಭದಲ್ಲಿ ಪ್ರತಿ ಪಹಣಿಗೆ ವಿಧಿಸಲಾಗಿದ್ದ ರೂ. 12/- ಗಳನ್ನು ಸರ್ಕಾರದ ಆದೇಶ ಸಂಖ್ಯೆ ಆರ್.ಡಿ. 18 ಎಂ.ಆರ್.ಆರ್ 2004 ದಿನಾಂಕ 04.12.2010 ರಂತೆ 10 ರೂ. ಗಳಿಗೆ ಇಳಿಸಲಾಗಿತ್ತು. ನಂತರ ಸರ್ಕಾರದ ಆದೇಶ ಸಂಖ್ಯೆ ಕಂ.ಇ 154 ಎಂ.ಆರ್.ಆರ್ 2017 ದಿನಾಂಕ 28.03.2018 ರಂತೆ 4 ಪುಟಗಳವರೆಗಿನ ಪಹಣಿಗಳಿಗೆ ರೂ. 10/- ಗಳನ್ನು ಹಾಗೂ 4 ಪುಟ ಮೀರಿದ ಪಹಣಿಗಳಿಗೆ ಮಾತ್ರ ರೂ. 50/- ನಂತೆ ಶುಲ್ಕ ವಿಧಿಸಲಾಗಿದೆ.<br>ಆದರೆ, ಪ್ರಾರಂಭದಿಂದಲೂ ಮ್ಯುಟೇಷನ್ ಮತ್ತಿತರ ಕಂದಾಯ ಆಸ್ತಿಗಳ ದಾಖಲೆ ಪತ್ರಗಳಿಗೆ ವಿಧಿಸಲಾಗಿದ್ದ ರೂ. 15/- ಗಳ ಶುಲ್ಕವನ್ನು ಹೆಚ್ಚಿಸಿರುವುದಿಲ್ಲ. |
| ಆ) | ಈ ಬೆಲೆ ಹೆಚ್ಚಳದಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಬರುವ ಆದಾಯವೆಷ್ಟು; (ವಿವರ ನೀಡುವುದು) ಹಾಗೂ ಆದಾಯದಿಂದ ಸರ್ಕಾರ ನಡೆಸಲು ನೆರವಾಗುವುದೇ; ವಿವರ ನೀಡುವುದು) | 4 ಪುಟಗಳು ಮೀರಿದ ಪಹಣಿಗಳಿಗೆ ರೂ. 50/- ರಂತೆ ಆದೇಶ ಸಂಖ್ಯೆ: ಕಂ.ಇ. 154 ಎಂ.ಆರ್.ಆರ್ 2017 ದಿನಾಂಕ: 28.03.2018 ರನ್ವಯ ಮಾರ್ಚ್-2018 ರಿಂದ ಪರಿಷ್ಕೃತ ಶುಲ್ಕವನ್ನು ನಿಗದಿಗೊಳಿಸಲಾಗಿರುತ್ತದೆ. ಆದ್ದರಿಂದ ಮಾರ್ಚ್ ತಿಂಗಳಿನಿಂದ ನವಂಬರ್-2018 ರ ಅಂತ್ಯದವರೆಗೆ ಒಟ್ಟು 9 ತಿಂಗಳಿಗೆ ರೂ. 1,15,17,250/- ಮೊತ್ತವು ಸಂಗ್ರಹವಾಗಿದ್ದು, ಇದನ್ನು ಭೂಮಿ ಯೋಜನೆ ನಡೆಸಲು ಉಪಯೋಗಿಸಲಾಗುತ್ತಿದೆ. ಈ ಹೆಚ್ಚುವರಿ ಆದಾಯದಿಂದ ರಾಜ್ಯದ ರೈತರಿಗೆ ಭೂಮಿ ಯೋಜನೆ ಮೂಲಕ ಹೆಚ್ಚಿನ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತದೆ. |

| | | |
|---|---|---|
| ಇ) | ಬೆಲೆಯನ್ನು ಧಿಡೀರು ಹೆಚ್ಚಿಸಲು ನಿರ್ಧಾರ ತೆಗೆದುಕೊಂಡಿರುವುದು ರೈತರಿಗೆ ತೊಂದರೆಯಾಗಿದ್ದು, ಇದನ್ನು ರದ್ದುಪಡಿಸಲು ಸರ್ಕಾರ ಕ್ರಮವಹಿಸುವುದೇ; | ಭೂಮಿ ಯೋಜನೆಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಭೂಮಿ ಯೋಜನೆಯು ಸ್ವಯಂ ಆದಾಯದಿಂದ ನಡೆಯುವ ಯೋಜನೆಯಾಗಿದ್ದು, ರಾಜ್ಯದಲ್ಲಿ ಯೋಜನೆ ಪ್ರಾರಂಭದಲ್ಲಿ ಭೂಮಿ ಕೇಂದ್ರಗಳಿಗೆ ನೀಡಲಾಗಿದ್ದ ತಾಂತ್ರಿಕ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲಗಳನ್ನು ಹೊಸದಾಗಿ ನೀಡುವ ಮೂಲಕ ಸರ್ವ ರೀತಿಯಲ್ಲೂ ತಾಂತ್ರಿಕವಾಗಿ ಸನ್ನದ್ಧಗೊಳಿಸುವ ಅವಶ್ಯಕತೆ ಇದ್ದು, ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸುವ ದೃಷ್ಟಿಯಿಂದ ಸರ್ಕಾರದ ಆದೇಶದಂತೆ ಸ್ವಲ್ಪ ಮಟ್ಟಿಗೆ ಬೆಲೆ ಹೆಚ್ಚಿಸಲಾಗಿದೆ.<br><br>ಆದಾಗ್ಯೂ, ಬೆಲೆ ಹೆಚ್ಚಳವನ್ನು ರದ್ದು ಪಡಿಸಬೇಕಾದ ಅವಶ್ಯಕತೆ ಇದ್ದಲ್ಲಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಈ) | ಅತಿವೃಷ್ಠಿ ಹಾಗೂ ಅನಾವೃಷ್ಠಿಯ ಪರಿಸ್ಥಿತಿಯಲ್ಲಿ ಭೂದಾಖಲೆಗಳ ದರ ಹೆಚ್ಚಿಸಲು ನಿರ್ಧರಿಸಿರುವುದು ಎಷ್ಟರ ಮಟ್ಟಿಗೆ ಸರಿ; ಅನ್ನ ಭಾಗ್ಯ, ಕ್ಷೀರ ಭಾಗ್ಯ, ಶಾದಿ ಭಾಗ್ಯ ಗಳನ್ನು ನೀಡುವ ಸರ್ಕಾರ ಭೂದಾಖಲೆಗಳ ಭಾಗ್ಯವನ್ನು ಜಾರಿಗೆ ತರಲು ಕ್ರಮಕೈಗೊಳ್ಳುವುದೆ?( ವಿವರ ನೀಡುವುದು) | ಭೂದಾಖಲೆಗಳ ಭಾಗ್ಯ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಕಂ.ಇ **130 ಎಂಆರ್‌ಆರ್ 2018**

(ಆರ್.ವಿ. ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು